**ಸಾಕ್ಷಿಗೆ ದಿನಾಂಕ:07-04-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಮುಖ್ಯ ವಿಚಾರಣೆ :: ವಾದಿ ಪರ ಶ್ರೀ. TRS ವಕೀಲರಿಂದ ::**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರವನ್ನು ಈಗಾಗಲೇ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಷಯಗಳು ಸರಿಯಾಗಿದ್ದು, ನಾನೇ ಓದಿ ತಿಳಿದು ಸಹಿ ಮಾಡಿರುತ್ತೇನೆ.

ಮುಂದುವರೆದು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

| Sl.No. | Documents | Exhibits |
|---|---|---|
| 1 | 1 ಎಸ್ ಪಿ ಎ | Ex.P-9 |

ಆದುದರಿಂದ ದಾವೆಯಲ್ಲಿ ಕೋರಿಕೊಂಡಂತೆ ದಾವೆಯನ್ನು ಡಿಕ್ರಿ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**:: ಪಾಟೀಸವಾಲು :: ಪ್ರತಿವಾದಿ ಪರ ಶ್ರೀಮತಿ ಬಿ ಟಿ ಜಿ ವಕೀಲರಿಂದ ::**

ರಾಮನಹಳ್ಳಿ ಗ್ರಾಮದ ಸರ್ವೇ ನಂಬರ್ 2 ರ ಒಟ್ಟು ವಿಸ್ತೀರ್ಣ 15 ಎಕರೆ 22 ಗುಂಟೆ ಆಗಿರುತ್ತದೆ ಎಂದರೆ ಸರಿ. ಅದರ ಪೈಕಿ 26 ಗುಂಟೆ ಖರಾಬು ಜಾಗವಿದ್ದು, ಇನ್ನು ಉಳಿಕೆ 14 ಎಕರೆ 36 ಗುಂಟೆ ಐನು ಜಾಗ ಇದ್ದು, ಅದನ್ನು ಮೂರು ಹಿಸ್ಸೆಯಲ್ಲಿ ವಿಂಗಡಿಸಲಾಗಿರುತ್ತದೆ ಎಂದರೆ ಸರಿ. ಸದರಿ ಜಮೀನಿನ ಪೈಕಿ 1 ನೇ ಬ್ಲಾಕ್ ಜಾಗದಲ್ಲಿನ 5 ಎಕರೆ 20 ಗುಂಟೆ ಜಾಗವನ್ನು ವಾದಿಯ ಗಂಡ ಚೌಡ ಬೋವಿ ರವರಿಗೆ ಸರ್ಕಾರದಿಂದ ಮಂಜೂರು ಮಾಡಲಾಗಿತ್ತು ಎಂದರೆ ಸರಿ. ಅದೇ ರೀತಿ ಬ್ಲಾಕ್ ನಂಬರ್ 2 ಜಾಗದಲ್ಲಿನ 5 ಎಕರೆ 20 ಗುಂಟೆ ಜಾಗವನ್ನು ಪ್ರತಿವಾದಿಗಳ ಪೂರ್ವಜ್ಜರಾದ ಚೌಡಬೋವಿ ಎನ್ನುವವರಿಗೆ ಸರ್ಕಾರದಿಂದ ಮಂಜೂರು ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಬ್ಲಾಕ್ ನಂಬರ್ 3 ಜಾಗದಲ್ಲಿನ 3 ಎಕರೆ 36 ಗುಂಟೆ ಜಾಗವನ್ನು ಟಿ ಆರ್ ರಾಮಣ್ಣ ಎನ್ನುವವರಿಗೆ ಸರ್ಕಾರದಿಂದ ಮಂಜೂರು ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸರ್ವೇ ನಂಬರ್ ನಲ್ಲಿನ 3 ಜನ ಮಂಜೂರಿದಾರರು ಒಂದೇ ಕುಟುಂಬದವರಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳ ಕುಟುಂಬದಲ್ಲಿನ 2 ನೇ ಬ್ಲಾಕ್ ಜಮೀನು ಅನ್ನು ಮರುಳಪ್ಪ ಎನ್ನುವವರಿಗೆ ಹಿಂದೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ಅನ್ನು PTCL

ಕಾಯಿದೆಯಡಿ ಪ್ರತಿವಾದಿಗಳ ಕುಟುಂಬದವರು ಅರ್ಜಿ ಸಲ್ಲಿಸಿ ಅವರ ಹೆಸರಿಗೆ 2015 ರಲ್ಲಿ ಪುನರ್ ಸ್ಥಾಪನೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತು ಸಹ ವಾದಿಯ ಕುಟುಂಬದವರು ಹಿಂದೆ ಮಾರಾಟ ಮಾಡಿದ್ದು ಅದನ್ನು ಸಹ PTCL ಕಾಯಿದೆಯಡಿ ವಾದಿಯ ಕುಟುಂಬದವರು ಅರ್ಜಿ ಸಲ್ಲಿಸಿ ಅವರ ಹೆಸರಿಗೆ 1979 ರಲ್ಲಿ ಪುನರ್ ಸ್ಥಾಪನೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳ ಜಮೀನು PTCL ಕಾಯಿದೆಯಡಿ ಪುನರ್ ಸ್ಥಾಪನೆಯಾದ ನಂತರದಲ್ಲಿ ಎಸಿ ರವರು 16.01.2015 ರಂದು ಪ್ರತಿವಾದಿಗಳ ಜಾಗಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಗಡಿ ಗುರುತಿಸಿ ಅವರ ಜಾಗದ ಸ್ವಾಧೀನ ಪ್ರತಿವಾದಿಗಳಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ವಾದಿಯ ಜಮೀನು ಅನ್ನು ಸಹ ಅಳತೆ ಮಾಡಿದ್ದು, ಸದರಿ ಅಳತೆಯ ಅನ್ವಯ ವಾದಿ ಕೇವಲ 4 ಎಕರೆ 19 ಗುಂಟೆ (5.08 ಗುಂಟೆ ಖರಾಬು ಸೇರಿ) ಜಾಗದಲ್ಲಿ ಸ್ವಾಧೀನದಲ್ಲಿ ಇದ್ದರು ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಅಳತೆಯ ಅಡಿಯಲ್ಲಿ ಪ್ರತಿವಾದಿಗಳು ಸಹ ಕೇವಲ 4 ಎಕರೆ 3 ಗುಂಟೆ (4 ಗುಂಟೆ ಖರಾಬು ಸೇರಿ) ಸ್ವಾಧೀನದಲ್ಲಿ ಇದ್ದರು ಎಂದು ವರದಿಯಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಮತ್ತೊಬ್ಬ ಮಂಜೂರಿದಾರರಾದ ಟಿ ಆರ್ ರಾಮಪ್ಪ ರವರ ಕುಟುಂಬದವರು 3 ಎಕರೆ 18 ಗುಂಟೆ (13 ಗುಂಟೆ ಖರಾಬು ಸೇರಿ) ಜಾಗದಲ್ಲಿ ಸ್ವಾಧೀನದಲ್ಲಿ ಇದ್ದರು ಎಂದು ವರದಿಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿ. ದಾವಾ ಸರ್ವೇ ನಂಬರ್ 2 ರಲ್ಲಿ ಎಸಿ ರವರ ಅಳತೆ ಅನ್ವಯ 3 ಎಕರೆ 18 ವರೆ ಗುಂಟೆ ಕಡಿಮೆ ಇರುತ್ತದೆ ಎಂದು ಕಂಡು ಬರುತ್ತದೆ ಎಂದರೆ ಸಾಕ್ಷಿಯು ದಾವಾ ಶೆಡ್ಯೂಲ್ ಸ್ವತ್ತಿಗೆ ಅದು ಸಂಬಂಧ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು ಮತ್ತು ಅವರ ಬಾಜುದಾರರಾದ ರಾಮಪ್ಪ ರವರ ಜಾಗವನ್ನು ಉತ್ತರದ ಸರ್ವೇ ನಂಬರ್ ಜಾಗದಲ್ಲಿ ಇರುವ ವ್ಯಕ್ತಿಗಳು ಒತ್ತುವರಿ ಮಾಡಿದ ಕಾರಣ ಕಡಿಮೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಸಮಯದಲ್ಲಿ ಸರ್ವೇ ನಂಬರ್ 33 ಮತ್ತು 34 ರ ಬಾಜುದಾರರು ಒತ್ತುವರಿ ಮಾಡಿರುತ್ತಾರೆ ಎಂದು ವರದಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 33 ಮತ್ತು 34 ರ ಬಾಜುದಾರರು ನಮ್ಮ ಜಮೀನು ಅನ್ನು ಸೇರಿ ಒತ್ತುವರಿ ಮಾಡಿರುವ ಬಗ್ಗೆ ಸರ್ವೇ ನಕ್ಷೆ ಇರುತ್ತದೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ವಾದಿಯು 5 ಎಕರೆ 20 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ.

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಸಾಕ್ಷಿಗೆ ದಾವಾ ಸರ್ವೇ ನಂಬರ್ 2 ಕ್ಕೆ ಸಂಬಂಧಪಟ್ಟಂತೆ ಆಗಿರುವ ನಕ್ಷೆಯನ್ನು ತೋರಿಸಲಾಗಿ ಅದನ್ನು ಅವರು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ಸದರಿ ನಕ್ಷೆಗೂ ಹಾಗೂ ನಮ್ಮ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ಜಾಗಕ್ಕೆ ಸಂಬಂಧಪಟ್ಟಂತೆ ನಾವು ತತ್ಕಾಲ್ ಪೋಡಿ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಪ್ರತಿವಾದಿಯು ತಕರಾರನ್ನು ADLR ರವರ ಸಮಕ್ಷಮ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ದಿಃ 09.07.2018 ರಂದು ನಾನು ವಾದಿಯ ಪರವಾಗಿ ADLR ರವರ ಸಮಕ್ಷಮ ಹಾಜರಾಗಿದ್ದೆ ಎಂದರೆ ಸರಿ. ಸದರಿ ಪ್ರಕರಣ ಬಾಕಿ ಇದ್ದ ಸಮಯದಲ್ಲಿಯೇ ಸರ್ವೇ ನಂಬರ್ 33 ಮತ್ತು 34 ಜಾಗದ ಸ್ವಾಧೀನದಾರರು ನಮ್ಮ ಹಾಗೂ ಪ್ರತಿವಾದಿಗಳ ವಿರುದ್ದ DDLR ರವರ ಸಮಕ್ಷಮ ಒತ್ತುವರಿಗೆ ಸಂಬಂಧಪಟ್ಟಂತೆ ಮತ್ತೊಂದು ಪ್ರಕರಣ ಹೂಡಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣವು DDLR ರವರ ಸಮಕ್ಷಮ ಬಾಕಿ ಇದ್ದ ಕಾರಣ ನಾವು ADLR ರವರ ಸಮಕ್ಷಮ ಹಾಕಿದ್ದ ಅರ್ಜಿಯನ್ನು ವಿಲೇ ಇಡಲು ಆದೇಶ ಮಾಡಲಾಗಿತ್ತು ಎಂದರೆ ಸರಿಯಲ್ಲ. ನಾವು ತತ್ಕಾಲ್ ಪೋಡಿಗೆ ಸಲ್ಲಿಸಿದ್ದ ಅರ್ಜಿಗೆ ಸಂಬಂಧಪಟ್ಟಂತೆ ಅಳತೆಗೆ ಎಲ್ಲಾ ಬಾಜುದಾರರಿಗೆ ನೋಟೀಸ್ ಜಾರಿ ಮಾಡಲಾಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಸರ್ವೇಯರ್ ರವರು ನಮ್ಮ ಜಾಗವನ್ನು ಅಳತೆ ಮಾಡಲು ಬರುವುದಿಲ್ಲ ಎಂದು ವರದಿ ಸಹ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸರ್ವೇಯರ್ ರವರ ವರದಿಗೆ ವಾದಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ವಾದಿಯು ಸರ್ವೇಯರ್ ರವರ ವರದಿಗೆ ಸಹಿ ಮಾಡಿದ್ದರು ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ತರೀಕೆರೆ.

ಸಾಕ್ಷಿಯ ಸಹಿ: